Matter Under Rlue 312 Notice Re: Instructions Given To Stop Work At Hemavathi Project.

† ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಕಳೆದ ೨೦ ದಿವಸದಿಂದ ಈಚೆಗೆ ಹೇಮಾವತಿ ಪ್ರಾಜೆಕ್ಟಿನಲ್ಲಿ ಕೆಲಸಮಾಡುವ ಎಲ್ಲಾ ಕಂಟ್ರಾಕ್ಟರುಗಳಗೂ ಕೆಲಸ ನಿಲ್ಲಸಬೇಕೆಂದು ನೋಟೀಸು ಕೊಟ್ಟಿದ್ದಾರೆ ಇದರಿಂದ ಸಾವಿರಾರು ಜನ ಕೂಲಿಗಾರರಿಗೆ ಕೆಲಸವಿಲ್ಲದಂತಾಗಿದೆ. ಎರಡನೆಯದಾಗಿ ಈ ಪ್ರಾಜೆಕ್ಟಿನ ಕೆಲಸವನ್ನು ಜಾಗ್ರತೆ ಮುಗಿಸಿ ನೀರು ಕೊಡುವುದಾಗಿ ಹೇಳುತ್ತಲೇ ಇದ್ದಾರೆ. ಎರಡು ವರ್ಷಗಳಲ್ಲಿ ಈ ಪ್ರಾಜೆಕ್ಟಿನಿಂದ ನೀರನ್ನೊದಗಿಸುವುದಾಗಿ ಬೃಹತ್ ನೀರಾವರಿ ಸಚಿವರು ಹೇಳಿಕೆ ಕೊಟ್ಟಿದ್ದಾರೆ, ಎಂಟು ದಿವಸಗಳ ಹಿಂದೆ ಕಂದಾಯ ಸಚಿವರು ಕಾಣಗಲಿನಲ್ಲಿ ಮಾತನಾಡುತ್ತಾ ಮುಂದಿನ ವರ್ಷ ನೀರೊದಗಿಸುವುದಾಗಿ ಸ್ಟೇಟ್‌ಮೆಂಟ್ ಮಾಡಿದ್ದಾರೆ. ಈಗ ಲಕ್ಷಾಂತರ ರೂಪಾಯಿ ಬೆಲೆಬಾಳುವ ಮೆಷೀನರಿ ಐಡಲ್ ಆಗಿದೆ, ಪ್ರತಿ ತಿಂಗಳೂ ೫೦-೬೦ ಲಕ್ಷ ರೂಪಾಯಿ ಸಿಬ್ಬಂದಿಗಾಗಿ ಖರ್ಚಾಗುತ್ತಿದೆ. ಈ ಯೋಜನೆಯನ್ನು ಆದಷ್ಟು ಜಾಗ್ರತೆ ಮುಗಿಸಲು ಕಾತುರತೆಯಿದೆ ಎಂದು ಹೇಳಿರುವಾಗ ನೋಟೀಸು ಕೊಟ್ಟು ಕೆಲಸ ನಿಲ್ಲಿಸಿದ್ದಾರೆ. ಹೀಗಾದರೆ ಈ ಕೆಲಸ ಹೇಗಿಯಾಲು ಇನ್ನೂ ಎಷ್ಟು ವರ್ಷ ಬೇಕು ? ಈ ಕೆಲಸವನ್ನು ಬೇಗ ಮಾಡಿದ್ದಿದ್ದರೆ ವರ್ಷೇವರ್ಷೇ ಷೆಡ್ಯೂಲ್ ರೇಟು ಶೇಕಡ ೧೫-೨೦ ರಷ್ಟು ಜಾಸ್ತಿಯಾಗುತ್ತದೆ. ಅಲ್ಲದೆ ನಿಧಾನವಾದರೆ ಜನರಿಗೆ ತೊಂದರೆಯಾಗುವುದೂ ಅಲ್ಲದೆ ಸಿಬ್ಬಂದಿಗೆ ವೃಥಾ ಖರ್ಚಾಗುವುದು. ಇಂಥ ಒಂದು ಉಪಯುಕ್ತವಾದ ಕಾರ್ಯವನ್ನು ನಿಲ್ಲಿಸಿ ನೋಟೀಸು ಕೊಟ್ಟಿರುವುದರ ಉದ್ದೇಶವಾದರೂ ಏನು? ಇದನ್ನು ಯಾವಾಗ ಮುಂಗಿಸುವರು ಎನ್ನುವುದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಮಾಡಬೇಕೆಂದು ಒತ್ತಾಯಮಾಡುತ್ತೇನೆ

ಶ್ರೀ ಎಚ್. ಎಸ್. ನಂಜೇಗೌಡ (ದೊಡ್ಡ ನೀರಾವರಿ ಶಾಖೆಯ ರಾಜ್ಯ ಪುಂತ್ರಿಗಳು)—

ದೊಡ್ಡ ಪ್ರಮಾಣದ ನೀರಾವರಿ ಕಾಮಗಾರಿಗಳು ನಡೆಯುತಕ್ಕ ಜಾಗದಲ್ಲಿ ಅನೇಕ ಬಗೆಯ ಕಾಮಗಾರಿಗಳು ನಡೆಯುತ್ತವೆ. ಅವುಗಳಲ್ಲಿ ಮೊದಲು ಯಾವುದಾಗಬೇಕು, ಅನಂತರ ಯಾವುದಾಗಬೇಕು ಎಂಬುದನ್ನು ಪರಿಶೀಲಿಸಿ ಅದರಂತೆ ಕೆಲಸಗಳನ್ನು ಪಡೆಸಲಾಗುತ್ತದೆ. ಇಂಥ ಪ್ರಾಜೆಕ್ಟ್‌ಗಳ ಕೆಲಸ ನಡೆಯುತಕ್ಕ ಕಡೆ ಡ್ಯಾಂ ವರ್ಕ್ಸ್ ನಡೆಯುತ್ತದೆ. ಸಿ.ಡಿ. ವರ್ಕ್ ನಡೆಯುತ್ತದೆ, ಡಿಸ್ಟ್ರಿಬ್ಯೂಟರೀಸ್ ವರ್ಕ್ ನಡೆಯುತ್ತದೆ, ಸರ್ವೆ ಕಾರ್ಯ ನಡೆಯುತ್ತದೆ— ಹೀಗೆ ಅನೇಕ ನಮೂನೆ ಕೆಲಸಗಳು ನಡೆಯುತ್ತಿವೆ. ಈ ಅನೇಕ ನಮೂನೆ ಕೆಲಸಗಳಲ್ಲಿ ಯಾವುದರ ಅಗತ್ಯ ಎಷ್ಟೆಷ್ಟಿದೆ ಎಂಬುದನ್ನು ನಿರ್ಧಾರ ಮಾಡಿ ಅದರಂತೆ ಕೆಲಸಗಳನ್ನು ಮುಂದುವರಿಸಲಾಗುತ್ತದೆ ಆದರೆ ಮಾನ್ಯ ಸದಸ್ಯರು ಸಭೆಯಲ್ಲಿ ಕೆಲಸ ನಿಲ್ಲಿಸಬೇಕೆಂದು ನೋಟೀಸನ್ನು ಕೊಟ್ಟಿದ್ದಾರೆ ಎಂದು ಅಷ್ಟನ್ನೇ ಹೇಳಿದ್ದಾರೆ, ವಿವರಗಳನ್ನೇನೂ ತಿಳಿಸಲಿಲ್ಲ ಬಹಳ ಮಂಗುಂ ಆಗಿ ಹೇಳಿರುತ್ತಾರೆ. ಆದುದರಿಂದ ಯಾರೂ ಆ ನೋಟೀಸಿನಿಂದ ಅಷ್ಟು ಗಾಬರಿ ಪಡಬೇಕಾದ ಅಗತ್ಯವಿಲ್ಲ ಎಂಹಂ ಹೇಳಿದರೆ ತಿಳುವಳಿಕೆ ಕೊಟ್ಟಿದ್ದಾರೆ.

ಶ್ರೀ ಕೆ. ಎಚ್. ಹನುಮೇಗೌಡ.— ಅಲ್ಲಿ ಆಳುಗಳು ಯಾರೊಬ್ಬರಿಗೂ ಕೆಲಸವಿಲ್ಲದೆ ಇದ್ದಾರೆ ಕಂಟ್ರಾಕ್ಟರಿಗೆ ಬಿಲ್ಲನ್ನು ಸರಿಯಾಗಿ ಕೊಡುತ್ತಿಲ್ಲ. ಟೈಜರಿಗಳಿಗೆ ಆ ಬಿಲ್ಲುಗಳನ್ನು ಆನರ್ ಮಾಡಬಾರದೆಂದು ಏಕೆ ಸಾಕೆಂದು ಕಾಣುತ್ತದೆ.

ಅಧ್ಯಕ್ಷರು.— ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಿ. ಸರ್ಕಾರದವರು ತಮ್ಮ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ ಇದರ ಮೇಲೆ ಯಾವ ಸಪ್ಲಿಮೆಂಟರಿಗೂ ಅವಕಾಶವಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).— ಮಾನ್ಯ ಅಧ್ಯಕ್ಷರೆ ಈ ದಿವಸ ರಾಜ್ಯದ ಒಂದು ಭಾಗದಲ್ಲಿ ಒಂದು ಬಹಳ ಗಂಭೀರವಾದ ತುರ್ತು ಪರಿಸ್ಥಿತಿಯುಂಟಾಗಿದೆ. ಅದೇನೆಂದರೆ—ಆ ಸಂಡೂರು ಕ್ಷೇತ್ರದಲ್ಲಿ ಯಾವ ಬಹಿರಂಗ ಸಭೆಗಳನ್ನ...

ಅಧ್ಯಕ್ಷರು.— ನಾನು ಸರ್ಕಾರದಿಂದ ರಿಪೋರ್ಟನ್ನು ಕಾಲಫಾರ್ ಮಾಡಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ.— ಅಲ್ಲಿ ಮಾಜಿ ರಾಜಮನೆತನದವರು ಗೂಂಡಾಗಳನ್ನು ಬಿಟ್ಟು ಜನರನ್ನು ಹೊಡೆಸುತ್ತಿದ್ದಾರೆ. ಈಗ ಸ್ವಾತಂತ್ರ್ಯ ಚಳವಳಿ ಅಲ್ಲಿ ಪ್ರಾರಂಭವಾದಂತೆ ಕಾಣುತ್ತಿದೆ....

ಅಧ್ಯಕ್ಷರು. — ಮಾನ್ಯ ಸದಸ್ಯರು ಈಗೇನು ವಿಚಾರ ಎತ್ತುತಿದ್ದಾರೆ ಆ ವಿಷಯದಲ್ಲಿ ಅವರು ಯಾವ ಒಂದು ನೋಟೀಸನ್ನೂ ಕೊಟ್ಟಿಲ್ಲ. ಆದರೆ ಹಾಗೇ ಸಭೆಯಲ್ಲಿ ತಮಗೆ ಮನಸ್ಸಿಗೆ ಬಂದೂ ವಿಷಯಗಳನ್ನು ಹೇಳಬಹುದೆಂದು ಅವರು ಭಾವಿಸಿದ್ದಂತೆ ಕಾಣುತ್ತಿದೆ. ಆದುದರಿಂದ ಮಾನ್ಯ ಲಿಂಗಪ್ಪ ನವರು ದಯಮಾಡಿ ಕುಳಿತುಕೊಳ್ಳಬೇಕು, ಹೀಗೆಲ್ಲ ಮಾಡಬಾರದು.

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ). — ನಾನು ಆ ಸರ್ಟಿಫೈಡ್ ಸ್ಕೂಲುಗಳಲ್ಲಿ ಸತ್ತ ಹುಟ್ಟರಂ ಜನ ಹೆಣ್ಣು ಮಕ್ಕಳ ಬಗ್ಗೆ ಒಂದು ಸೂಚನೆಯನ್ನು ತಮ್ಮ ಕಡೆಗೆ ಕಳುಹಿಸಿದ್ದೆ.

ಅಧ್ಯಕ್ಷರು.— ಅದು ಸದ್ಯದಲ್ಲೇ ಬರುತ್ತದೆ.

Privilege motion Re: P.U.C. Report

ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ ನಾನು ತಮಗೆ ರೂಲ್ ೧೭೭ರ ಪ್ರಕಾರ ಈ ಸಭೆಯ ಹಕ್ಕು ಭಾಧ್ಯತೆಗೆ ಸಂಬಂಧಪಟ್ಟ ವಿಚಾರವೊಂದರ ಬಗ್ಗೆ ಅಂದರೆ ಕೆ.ಯು.ಸಿ. ವರದಿಯ ಬಗ್ಗೆ ಮಾನ್ಯ ಅರಣ್ಯ ಸಚಿವರಾದ ಶ್ರೀ ಕೆ ಎಚ್. ಪಾಟೀಲರವರು ಆ ವರದಿಯನ್ನು ಒಂದು ಸ್ಕ್ರಾಫ್ ಆಫ್ ಪೇಪರ್ ಎಂದು ಹೇಳಿದ್ದರ ವಿಚಾರವಾಗಿ....

ಅಧ್ಯಕ್ಷರು.— ಅದಕ್ಕೆ ನಾನು ತಮಗಾಗಲೇ ಉತ್ತರ ಕಳುಹಿಸಿದ್ದೇನೆ. ಅದನ್ನು ಮತ್ತೆ ಇಲ್ಲಿ ಎತ್ತುವುದಕ್ಕೆ ಅವಕಾಶವಿಲ್ಲ. ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕ್ಷರು ದಯಮಾಡಿ ಒಂದು ನಿಮಿಷ ಕುಳಿತುಕೊಂಡರೆ ನಾನು ಏನು ಹೇಳುತ್ತಿದ್ದೇನೆಂಬುದನ್ನು ಅವರಿಗೆ ತಿಳಿಯಲು ಅವಕಾಶವಾಗುತ್ತದೆ.

ಅಧ್ಯಕ್ಷರು.— ಆ ವಿಚಾರವನ್ನು ಮತ್ತೆ ಇಲ್ಲಿ ಎತ್ತುವುದಕ್ಕೆ ಅವಕಾಶವಿಲ್ಲ.

Re.— Taking up of approved works in old Mysore area.

ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ).— ಹಳೇ ಮೈಸೂರು ವಿಭಾಗದಲ್ಲಿ ನಡೆಯಬೇಕಾದರೆ ಅನೇಕ ಬಹಳ ಪ್ರಾಮುಖ್ಯವತದ ಕಾಮಗಾರಿಗಳ ಬಗ್ಗೆ ಟೆಕ್ನಿಕಲ್ ಅಪ್ರೂವಲ್ ಆಗಿದ್ದು ಅವುಗಳ ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ಲಿಗೆ ಕಳುಹಿಸಲಾಗಿದೆ ಎಂಬ ನೆಪದಲ್ಲಿ ಆ ಕೆಲಸಗಳನ್ನೆಲ್ಲಾ ಹಾಗೇ ಕೈಬಿಟ್ಟಿದ್ದಾರೆ. ಇದರಿಂದ ಬಹಳ ಕಷ್ಟವಾಗಿದೆ. ಕಳೆದ ಎರಡು ವರ್ಷಗಳಿಂದ ಇಲ್ಲಿ ಒಂದೂ ಕಾಮಗಾರಿಗಳನ್ನು ಮಾಡಿಸಲಿಲ್ಲ....

ಅಧ್ಯಕ್ಷರು.— ಈಗ ಮಾನ್ಯ ಆರ್ಥಿಕ ಸಚಿವರು ಒಂದು ಹೇಳಿಕೆಯನ್ನು ಕೊಡುತ್ತಾರೆ, ತಾವು ಕೇಳಬೇಕು.

STATEMENT OF THE FINANCE MINISTER

Re. The Financial position of the State

Sri M. Y. GHORPADE (Minister for Finance)

The present financial situation of the state should be viewed in the context of drought expenditure and the newphase of financial discipline in which continuing over-draft has no place. Previously. the States could run into almost unlimited over-drafts. That is how the over-draft of our State was as much as Rs. 70 crores in April 1972. This was the financial burden which the new Government had to commence its task. The Government of India no doubt gave an advance of Rs. 62 crores towards clearance of over draft, but of this